Sri M. V. KRISHNAPPA.—I beg to introduce:

The Mysore Tenants (Temporary Protection from Eviction) (Amendment) Bill, 1963.

Mr. SPEAKER.—The Bill is introduced.

---

## MYSORE TENANCY LAWS (AMENDMENT) BILL, 1963.

*Motion to Consider*

Sri M. V. KRISHNAPPA (Minister for Revenue).—I beg to move:

"That the Mysore Tenancy Laws (Amendment) Bill, 1963, be taken into consideration."

Mr. SPEAKER.—Motion moved:

"That the Mysore Tenancy Laws (Amendment) Bill, 1963, be taken into consideration."

Sri M. V. KRISHNAPPA.—In 1957, Act Nos. 13, 14, 15 and 16 were passed so as to incorporate the existing tenancy laws. Act No. 13 pertained to the Bombay areas that have been integrated with Mysore. Act No. 14 pertains to the Coorg tenancies and Act No. 15 pertains to the Hyderabad and Madras areas and Act No. 16 relates to the old Mysore Area. These acts were amended suitably and the duration of the agricultural lands under the tenancy laws in force in the State of Mysore which was further extended by the Mysore Tenancy Laws (Third Amendment) Act, 1962, is due to expire on the 31st March 1963. As the Mysore Land Reforms Act, 1962, which provides for the repeal of these laws, is not likely to be brought into force immediately, it is necessary to provide for the continuance of the *status quo* until the Mysore Land Reforms Act is brought into force. Hence this Bill.

Since Sri Muckannappa raised the question as to why Government was delaying the enforcement of land reforms I wish to answer him, though that matter is not relevant at this stage. But in order to avoid further discussion on this aspect, I wish to assure the House that the Government is very earnest in enforcing the Land Reforms Act of 1962. But as I have stated several times in this and the other House, in view of the judgment of the Supreme Court in the matter of the Kerala Agrarian Reforms Act, an amendment to Article 31 (A) of the Constitution, seems to be necessary. That article has to be amended so as to include in its definition the ryotwari system laws now existing in South Kanara District, Kollegal Taluk and Bellary district, which were formerly part of the Madras State. And the Sikimdars of Hyderabad have to be defined so as to include them under that article. So, Sir, the Central Government and the concerned officers of the Planning Commission had come to Mysore and the State Government had a meeting with them in October and the Central Government and the Planning Commission had promised that they would amend article 31 (a) in December. Due to this Emergencey by the invasion of Chinese Army over the territories of India, the Parliament could not take up this matter and amend that

article 31 (a) of the Constitution. This is the main factor and some more suggestions were made by the Planning Commission so as to incorporate them in our own Act, which are under the active consideration of this Government. We have offered option except postponing the implementation of this Land Reforms Bill. Hence, the Land Reforms Bill, 1962 is going to take some more time to be enforced. So, Sir, we have to extend the period of both the Mysore Tenancy Laws 1962 and the other, *viz.* Mysore Tenants (Temporary Protection from Eviction) Act.

2-30 P.M.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ರೆವೆನ್ಯೂ ಮಂತ್ರಿಗಳು ಈಗೇಣೀ ಮಸೂದೆಯನ್ನು ಈ ಸಭೆಯ ಮುಂದೆ ಇಡುತ್ತಾ ಸರಕಾರ ಈ ಹಿಂದೆ ಮಾಡಿದ ಭೂಸುಧಾರಣೆಯನ್ನು ಜಾರಿಗೆ ತರಲು ಅವಕಾಶವಿಲ್ಲ ಎಂದು ಕೆಲವು ವಿಚಾರಗಳನ್ನು ಹೇಳಿದರು. ನಾನು ಮಾನ್ಯ ಮಂತ್ರಿಗಳನ್ನು ಒಂದು ಮಾತನ್ನು ಕೇಳುತ್ತೇನೆ. 1957ನೇ ಇಸವಿಯಲ್ಲೇ ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಜತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದರು. ಆ ಕಮಿಟಿಯವರು ಬಹಳ ಚೆನ್ನಾಗಿರುವ ಒಂದು ರಿಪೋರ್ಟನ್ನು ತಯಾರು ಮಾಡಿ ಬರೆದರು. ಅವರೇ ಹೇಳಿರುವ ರಿಪೋರ್ಟಿನಲ್ಲಿ ಗೇಣೀದಾರರ ಸಮಸ್ಯೆ ಬಹಳ ಕಠಿಣವಾದ ಸಮಸ್ಯೆ, ಅದನ್ನು ಆದಷ್ಟು ಜಾಗ್ರತೆ ಪರಿಹಾರ ಮಾಡದಿದ್ದರೆ, ನಮ್ಮಲ್ಲ ಉಳುವವನಿಗೆ ಜಮೀನು ಸಿಕ್ಕದೆಹೋಗುತ್ತದೆ; ಹಾಗೂ ಜಮೀನು ಕೊಡದೇಹೋದರೆ ದೇಶದಲ್ಲಿರುವ ಭೂಮಿಯಿಂದ ಸಾಕಷ್ಟು ಪರಿಣಾಮ ತರವಾದ ಉತ್ಪತ್ತಿ ಬರುವುದಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಆ ರಿಪೋರ್ಟಿನಲ್ಲಿರುವ ಅಂಕಿ ಅಂಶಗಳನ್ನು ನೋಡಿದರೆ, ಸುಮಾರು ಶೇಕಡ 22 ರಷ್ಟು ಗೇಣೀದಾರರಿದ್ದಾರೆ. ಈ ದೇಶದಲ್ಲಿ ಸುಮಾರು ಎಪ್ಪತ್ತು ಲಕ್ಷ ಎಕರೆಗಳಷ್ಟು ಭೂಮಿ ಗೇಣೀದಾರರ ವಶದಲ್ಲಿದೆ. ಇಂತಹ ಒಂದು ದೊಡ್ಡ ಸಮಸ್ಯೆಯನ್ನು ಬಗೆ ಹರಿಸುವುದಕ್ಕೆ ಬಹಳ ಒಳ್ಳೆಯ ಸಲಹೆಗಳನ್ನು ಮಾಡಿದರು. ಅವರು ತಮ್ಮ ರಿಪೋರ್ಟಿನಲ್ಲಿ ಈ ರೀತಿ ಹೇಳಿದ್ದಾರೆ.

> "The abolition of intermediaries and the protection given to tenants are intended to give the tiller of the soil his rightful place in the agrarian system and by reducing of eliminating burdens he has borne in the post to provide him with fuller incentives for increasing agricultural production. Similarly to bring tenants into direct relation with the State and to put an end to the tenant-landlord nexus are essential steps in the establishment of a stable rural economy."

ಹೀಗೆ 1957ರಲ್ಲೇ ಹೇಳಿ ಒಂದು ತೀರ್ಮಾನಕ್ಕೆ ಬಂದು ಆರು ವರ್ಷಗಳಾದರೂ ಅವರು ಹೇಳಿದಂತೆ stable rural economy ಸ್ಥಾಪಿಸಿಲ್ಲ; ಇದು ಅಗತ್ಯ. ಅದಕ್ಕೆ ಹಳ್ಳಿಯ ರೈತನ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕಾದರೆ ಮಧ್ಯವರ್ತಿಗಳ ತೊಂದರೆಯಿಂದ ಜೆನೆಂಟುಗಳನ್ನು ತಪ್ಪಿಸಬೇಕೆಂದು ಹೇಳಿ ಅದಕ್ಕನುಗುಣವಾಗಿ ಭೂಸುಧಾರಣೆ ಮಸೂದೆ ಈ ಶಾಸನ ಸಭೆಯಲ್ಲಿ ಪಾಸಾದರೂ ಅದರಲ್ಲೀಗ ಅನೇಕ ಲೋಪ ದೋಷಗಳಿವೆ. ಅದನ್ನು ತಿದ್ದುಪಡಿ ಮಾಡಲು ಪ್ಲಾನಿಂಗು ಕಮಿಷನ್ನಿನವರು ಸೂಚಿಸಿದ್ದಾರೆ; ಅದಕ್ಕೋಸ್ಕರ ಈ ರೀತಿಯಾದ ಗೇಣೀ ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ ಎಂದು ಹೇಳಿದರು. ಇದರ ಬಗ್ಗೆ ಒಂದು ಮಾತನ್ನು ನಾನು ಕೇಳುತ್ತೇನೆ. ತಮಗೆ ಇವೊತ್ತಿನ ದಿವಸ ತುರ್ತು ಪರಿಸ್ಥಿತಿ ಬಂದಿರತಕ್ಕ ಒಂದು ನೆಪ ಹಾಕಿ ಅದಕ್ಕೆ ಪ್ರಾಶಸ್ತ್ಯ ಕೊಡಬೇಕೆಂದು ತಾವು ಒಂದು ಕಡೆ ಹೇಳುತ್ತೀರಿ. ದೇಶದ ತುರ್ತು ಪರಿಸ್ಥಿತಿಗೆ ಮುಖ್ಯವಾಗಿ ಬೇಕಾಗಿರುವುದು ಒಬ್ಬ ಸೈನಿಕ. ಅವನು ಹಿಮಾಲಯ ಪ್ರದೇಶದಲ್ಲಿ ಚೀಣೀಯರ ಅಕ್ರಮಣವನ್ನು ಎದುರಿಸುವಂತಹ ಯೋಧ. ಅಲ್ಲಿ ಕೆಲಸ ಮಾಡಲು ಈಗಿನ ತುರ್ತು ಪರಿಸ್ಥಿತಿಯಲ್ಲಿ ಯೋಧರ ಸಹಾಯ ಎಷ್ಟು ಅಗತ್ಯವೋ ಅದರಂತೆ ನಮಗೆ ಬೇಕಾದ ಆಹಾರದ ಉತ್ಪನ್ನವನ್ನು ಮಾಡುವವನು ಸೈನಿಕನಂತೆ ಹೊಲಗದ್ದೆಯಲ್ಲಿರುವವನೂ ಮತ್ತೊಬ್ಬ ಯೋಧ. ಅವನ ರಕ್ಷಣೆಯನ್ನು ಮಾಡದಿರುವುದಕ್ಕಿಂತ ಹೆಚ್ಚಿನ ತುರ್ತು ಪರಿಸ್ಥಿತಿ ಏನಿತ್ತು ಎಂದು ಕೇಳಬೇಕಾಗಿದೆ. ಆಹಾರದ ಉತ್ಪನ್ನವನ್ನು ಹೆಚ್ಚುಮಾಡು

(ಶ್ರೀ ಎಸ್. ಶಿವಪ್ಪ)

ವುದು ಈಗಿನ ತುರ್ತು ಪರಿಸ್ಥಿತಿಯಲ್ಲಿ ಬಹಳ ಮಹತ್ವವಾದ ಪ್ರಶ್ನೆಯಲ್ಲವೇ ಎಂದು ನಾನು ಕೇಳುತ್ತೇನೆ. ಇದರ ಬಗ್ಗೆ ನೀವು ಹಿಂದು ಮುಂದೆ ನೋಡುತ್ತಿದ್ದೀರಿ. ಮಾನ್ಯ ರೆವೆನ್ಯೂ ಮಂತ್ರಿಗಳು ಈ ತಿದ್ದುಪಡಿಯನ್ನು ತಂದು ಇನ್ನೊಂದು ವರ್ಷ ಕಾಲ ಏತಕೋಸ್ಕರ ಎಸ್ತರಿಸುತ್ತಿದ್ದೇವೆ ಎನ್ನುವುದಕ್ಕೆ ಒಂದು ವಿಧಿಯನ್ನೂ ಹೇಳಿದರು.

**Sri M. V. KRISHNAPPA.**—The Constitution has to be changed. It is not in our hands.

ಶ್ರೀ ಎಸ್. ಶಿವಪ್ಪ.—ಇದರಲ್ಲಿ ನ್ಯೂನತೆಗಳಿವೆ ಎಂದು ಹೇಳಿ ಈ ಶಾಸನ ಸಭೆಯು ಮುಂದೆ ಈ ತಿದ್ದುಪಡಿಯನ್ನು ತಂದಿದ್ದಾರೆ. ಅವರು ಹೇಳಿರುವ ಮಾತ ಗಳಿಂದಲೇ ಸರಕಾರದ ನೀತಿ ಮತ್ತು ಧೋರಣೆಯೇನು ಎನ್ನುವುದನ್ನು ತೋರಿಸುತ್ತದೆ. ಮುಂದಾದರೂ ಈ ದೇಶದಲ್ಲಿರತಕ್ಕ ಭೂಸುಧಾರಣಾ ಕಾನೂನನ್ನು ಜಾರಿಗೆ ತರಬೇಕು ಎಂದು ಹೇಳುವುದು ಬರಿ ವಾದಕ್ಕಾಗಿಯೇ ಹೊರತು ಬೇರೇನೂ ಅಲ್ಲ, ಹೀಗೆ ಬರೀ ಮಾತಿನಲ್ಲಿ ಹೇಳುವುದಕ್ಕಿಂತ ಕೃತಿಯಲ್ಲಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು ಎನ್ನುವ ಸೂಚನೆಯನ್ನು ಮಾಡಬಯಸುತ್ತೇನೆ. ಈಗಲಾದರೂ ಸರಕಾರ ದವರು ಈ ರೀತಿಯಾದ ತುಂಡು ತುಂಡಾದ ತಿದ್ದುಪಡಿಗಳನ್ನು ವರ್ಷೇ ವರ್ಷೇ ತರುವುದಕ್ಕೆ ಬದಲಾಗಿ ಒಂದು ಪ್ರಶಸ್ತವಾದ ಮನೂದೆಯನ್ನೇ ಅದಷ್ಟು ಜಾಗ್ರತೆಯಾಗಿ ಈ ಶಾಸನ ಸಭೆಯಲ್ಲಿ ತರುತ್ತೇವೆಂದು ಹೇಳಿದ್ದರೆ ಅವರು ಈ ಸಭೆಯ ಮತ್ತು ದೇಶದ ಜನತೆಗೆ ಪ್ರೀತಿಪಾತ್ರರಾಗುತ್ತಿದ್ದರು. ಇಲ್ಲದೇ ಹೋದರೆ ಇಂತಹ ಒಂದು ತಿದ್ದುಪಡಿಯನ್ನು ತರುವುದರಿಂದ ರೈತನ ಮತ್ತು ಗೇಣಿದಾರರ ರಕ್ಷಣೆಯನ್ನು ಮಾಡುವುದಕ್ಕೆ ಸಹಾಯವಾಗುವುದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈಗೇನೋ ಇದರಿಂದ ಗೇಣಿದಾರರಿಗೆ ಒಂದು ಸೌಲಭ್ಯ ದೊರೆತಿದೆ. ಇದನ್ನು ವಿರೋಧ ಮಾಡುವುದಕ್ಕೆ ಹೋಗದೆ, ತಮ್ಮ ಒಂದು ಕರ್ತವ್ಯ ಚ್ಯುತಿಯನ್ನು ಸರಿಮಾಡಿಕೊಂಡು ಅದಷ್ಟು ಬೇಗನೆ ಶಾಸನ ಸಭೆಯಲ್ಲಿ ಪಾಸಾದ ಗೇಣಿ ಶಾಸನವನ್ನು ಜಾರಿಗೆ ತರಬೇಕೆಂದು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

**Mr. SPEAKER.**—(Addressing Sri Muckannappa) I will call upon you. Please bear in mind the scope of the debate.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಶಿರಾ).—ಮಾನ್ಯ ಸಭಾಪತಿಗಳೇ, 1963—64ನೆಯ ಆಯವ್ಯಯದ ಅಧಿವೇಶನ ಪ್ರಾರಂಭವಾದ ಮೇಲೆ ಎರಡು ದುಃಖಕರವಾದ ಸಂದರ್ಭಗಳು ನಮ್ಮ ಕಣ್ಣು ಮುಂದೆ ಬಂದುವು. ಮೊದಲನೆಯದು ತಮಗೆಲ್ಲಾ ತಿಳಿದಂತೆ ಕರ್ನಾಟಕದ ಒಬ್ಬ ಮುಖಂಡರು ನಮ್ಮಿಂದ ಕಣ್ಮರೆಯಾದುದು, ಹಾಗೂ ದೇಶದಲ್ಲೆಲ್ಲಾ ಭೂಮಿಯನ್ನು ನಂಬಿರತಕ್ಕ ಭೂಮಿಯಿಂದಲೇ ಜೀವನ ಮಾಡತಕ್ಕ ನಮ್ಮ ರೈತರನ್ನು ತೊಂದರೆಗೆ ಈಡು ಮಾಡಿರತಕ್ಕದ್ದು. ಇವೆರಡು ವಿಷಯಗಳನ್ನೂ ಅಡಳಿತ ನಡೆಸತಕ್ಕ ಸರಕಾರ ಎಂದೂ ಮರೆಯಬಾರದು ಎಂದು ಇಲ್ಲಿ ತಮ್ಮ ಮುಖೇನ ಹೇಳುತ್ತೇನೆ. ದೇಶದಲ್ಲಿ ಭೂಮಿ ಬೇಕು ಎನ್ನುವ ಆತುರದಿಂದ ಭೂಮಿಯನ್ನು ಉಳತಕ್ಕ ಜನರಿಗೆ ಕೊಡಬೇಕು ಮತ್ತು ಅಂತಹ ಜನರ ಶಕ್ತಿಯನ್ನು ಹೆಚ್ಚಿಸಬೇಕು ಎಂದು ಹೇಳುತ್ತಿದ್ದರು. ಮೇಘದಿಂದ ಕೂಡಿದ ಮಳೆ ಹನಿಗೆ ಕಾಯುತ್ತಿರುವಂತಹ ಈ ಜನಕ್ಕೆ ಅಧಿಕಾರ ವಹಿಸಿಕೊಂಡ ಸರಕಾರ ಅವರ ಸ್ಥಿತಿಯನ್ನು ಉತ್ತಮ ಮಾಡಬೇಕೆಂದು ಒಂದು ಕಾನೂನನ್ನು ಜಾರಿಗೆ ತಂದರು. ಆದರೆ ಅದನ್ನು ಜಾರಿಗೆ ತರಲು ಕೆಲವು ತೊಂದರೆಗಳಾಗಿದೆ ಎನ್ನುವ ಮಾತುಗಳನ್ನು ಮಾನ್ಯ ಮಂತ್ರಿಗಳು ಹೇಳಿದರು. ಜನತೆಗೆ ಮೋಸ ಮಾಡಬಾರದು, ಅನ್ಯಾಯ ಮಾಡಬಾರದು ಎಂದು ಭೂಸುಧಾರಣೆಮಾಡುತ್ತೇವೆಂದು ಹೇಳಿ ಅಪೊತ್ತಿನ ದಿವಸ ಅಧಿಕಾರದಲ್ಲಿದ್ದ ಸರಕಾರ ಜಮಖಂಡಿ ಜತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ರಚಿಸಿತು. ಮೈಸೂರು ಸಂಸ್ಥಾನದಲ್ಲಿ ಎಷ್ಟು ಭೂಮಿ ಇದೆ, ಸರಕಾರದ ವಶದಲ್ಲಿ ಎಷ್ಟು ಭೂಮಿಯಿದೆ, ಎಷ್ಟು ಜನ ಭೂಮಿ ಹೀನರಿದ್ದಾರೆ ಮತ್ತು ಎಷ್ಟು ಜನರಿಗೆ ಭೂಮಿಯನ್ನು ಹಂಚಬಹುದು ಎನ್ನುವ ವಿವರಗಳನ್ನೆಲ್ಲಾ ತಯಾರಿಸಲು ಮೂರು ತಿಂಗಳು ಕಾಲ ಪ್ರವಾಸ ಮಾಡಿ ಅವರು ಒಂದು ರಿಪೋರ್ಟನ್ನು ಕೊಟ್ಟರು.

ಭೂಸುಧಾರಣೆಯ ವಿಚಾರದಲ್ಲಿ ಜತ್ತಿ ಸಮಿತಿಯ ವರದಿ ಈ ಸಭೆಯ ಮುಂದೆ ಚರ್ಚೆಗೆ ಬಂದಿದೆ. ಜತ್ತಿ ಮಂತ್ರಿಮಂಡಳದ ಕಾಲದಲ್ಲಿ ಅನೇಕ ದಿವಸಗಳವರೆಗೆ ಈ ಸಭೆಯಲ್ಲಿ ಭೂಸುಧಾರಣೆಯ ಮನೂದೆಯ ಮೇಲೆ ಚರ್ಚೆ ನಡೆದಿದೆ. 55 ಜನ ಸದಸ್ಯರಿಂದ ಕೂಡಿದ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಅರು ತಿಂಗಳಕಾಲ ಚರ್ಚೆಯಾಯಿತು. ಆದರೂ ಇದನ್ನು ಕಾನೂನು ಕಡಿತಕ್ಕೆ ಪರಿಸುವುದಾಗಿಲ್ಲ. ಇದನ್ನು ಜಾರಿಗೆ ತರುವುದಕ್ಕೆ ಸರಕಾರಕ್ಕಿರುವ ತೊಂದರೆಯೇನು ಎನ್ನುವುದು ಅರ್ಥವಾಗುವುದಿಲ್ಲ. ಇಂಥ ಸಣ್ಣ ಪುಟ್ಟ ವಿಚಾರಗಳಲ್ಲಿ ಅರು ತಿಂಗಳು, ಒಂದು ವರ್ಷ ಜೀವದಾನ

ಬೇಡುವುದು ಸರಿಯಿಲ್ಲ. ಸರಕಾರ ಇಷ್ಟು ನಿರ್ವೀರ್ಯವಾಗುವುದಕ್ಕೆ ಕಾರಣವೇನು ? ಸರಕಾರದಲ್ಲಿ ಬುದ್ಧಿವಂತಿಕೆಯಿದೆ, ಶಕ್ತಿಯಿದೆ. ಆದರೆ ಇದು ಹೀಗೆ ಏಕೆ ? ಆಗಿನ ಕಂದಾಯ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರೂ ಇಲ್ಲಿ ಇದ್ದಾರೆ. ಆಗಿನ ಮುಖ್ಯಮಂತ್ರಿಗಳು ಈಗ ಹಣಕಾಸಿನ ಮಂತ್ರಿಗಳಾಗಿದ್ದಾರೆ. ಆಗಿನ ಕಂದಾಯ ಮಂತ್ರಿಗಳು ಕೊಟ್ಟ ಮಾತು ಏನಾಯಿತು ? ಮುಖ್ಯ ಮಂತ್ರಿಗಳ ಬದಲಾವಣೆಯಾದ ಹಾಗೆ ಮಂತ್ರಿಮಂಡಲ ಬದಲಾವಣೆಯಾದ ಹಾಗೆ ಸರಕಾರದ ರೀತಿ ನೀತಿ, ತತ್ವಗಳು ಬದಲಾವಣೆಯಾಗುತ್ತವೆಯೇ ? ಆಡಳಿತ ಪಕ್ಷ ಈ ರೀತಿ ಮಾಡುವುದು ಸರಿಯಿಲ್ಲ. ಈ ಅಧಿವೇಶನ ಮುಗಿಯುವದರೊಳಗೆ ಭೂಸುಧಾರಣೆಯ ಕಾನೂನನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ತಡಮಾಡುವುದರಿಂದ ಜಮೀನುದಾರರು ಭೂಮಿಯನ್ನು ಮಾರಾಟಮಾಡುತ್ತಿದ್ದಾರೆ. ಇದಲ್ಲದೆ ಬೇರೆಬೇರೆಯವರ ಹೆಸರಿನಲ್ಲಿ, ಹೆಂಡತಿ ಮಕ್ಕಳು ಗರ್ಭದಲ್ಲಿರುವ ಶಿಶುವಿಗೆ ನಾಮಕರಣಮಾಡಿ ಭೂಮಿಯನ್ನು ಹಂಚುತ್ತಿದ್ದಾರೆ. ಈ ಕಾನೂನು ಪಾಸ್ ಮಾಡಿದ ಕಾಲದಲ್ಲಿ ಇದ್ದಂಥ ಮುಖ್ಯಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳು ಇದಕ್ಕೆ ಜವಾಬುದಾರರಾಗಿದ್ದಾರೆ.

**Sri C. J. MUCKANNAPPA.**—Then Chief Minister and the then Revenue Minister should be beheaded for not having implemented this Land Reforms Bill!

**Mr. SPEAKER.**—I ask they should not be beheaded! (*laughter*) It cannot be done here.

**Sri C. J. MUCKANNAPPA.**—By saying 'beheaded', I do not mean 'take away the head'. What I mean is, they must be dismissed from this Assembly; My freind Sri B. D. Jatti must resign and get away; My friend Sri Kadidal Manjappa must resign and get away from this House, because what they have striven for, they have not been able to implement it in the interest of the landless people. So, that is my feeling.

**Mr. SPEAKER.**—Am I hearing him in Kannada or English?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಯಾರೇ ಆಗಲಿ, ಯಾರೇ ಮಂತ್ರಿಯಾಗಲೀ, ಹೇಳಿದ ಮಾತು, ಮಾಡಿದ ಕೆಲಸ ಕಾರ್ಯರೂಪದಲ್ಲಿ ಬಾರದೇ ಹೋದರೆ, ಅವರ ಮಾತಿನ ಅರ್ಥವಾಗುವುದಿಲ್ಲ. ಇದನ್ನು ಕೋಪದಿಂದಾಗಲಿ, ರೋಷದಿಂದಾಗಲಿ, ಹೊಟ್ಟೆಕಿಚ್ಚಿನಿಂದಾಗಲಿ ನಾನು ಹೇಳುತ್ತಿಲ್ಲ. ನೀವು ಮಾಡಿದ ಕೆಲಸ ಕಾರ್ಯರೂಪದಲ್ಲಿ ಬಂದಿದೆಯೇ ಎಂದು ಶ್ರೀಮಾನ್ ಜತ್ತಿಯವರನ್ನು ಕೇಳುತ್ತೇನೆ. ನಿಮಗೆ ಸಲಹೆ ಕೊಡಲು ಲಾ ಡಿಪಾರ್ಟುಮೆಂಟು ಇರಲಿಲ್ಲವೇ ? ಕಾನೂನುನಲ್ಲಿಯ ದೋಷ ದೋಷಗಳ ಬಗ್ಗೆ ಅವರು ಸಲಹೆ ಕೊಡಲಿಲ್ಲವೆ ? ಆಗ್ಗೆ ಸಲಹೆ ನೀಡಿದ ಲಾ ಡಿಪಾರ್ಟ್‌ಮೆಂಟಿನ ಸೆಕ್ರೆಟರಿಯವರು ಇಂದು ಹೈಕೋರ್ಟ್ ನ್ಯಾಯಾಧೀಶರಾಗಿದ್ದಾರೆ. ನನಗೇನೋ ಅನ್ನಿಸುತ್ತದೆ. ನೀವು ಈಗ ಕಾಂಟನೆಪ ಹೇಳುತ್ತಿದ್ದೀರಿ. ಏನೇ ಆಗಲಿ ಹೇಳಿದ್ದನ್ನು ಮಾಡಿ ತೋರಿಸಬೇಕು. ಇಲ್ಲದಿದ್ದರೆ ಜನ ನಿಮಗೆ ಶಾಪ ಕೊಡುತ್ತಾರೆ. ಕಾನೂನು ಜಾರಿಗೆ ಕೊಡುವುದನ್ನು ಮುಂದೂಡುತ್ತಿರುವುದರಿಂದ ಅನೇಕ ಕಡೆ ಅಕ್ರಮ ಸಾಗುವಳಿ ನಡೆದಿದೆ. ಅರಣ್ಯ ಪ್ರದೇಶದಲ್ಲಿ ಮರಗಳನ್ನು ಕಡಿದು ಅಲ್ಲಿ ಸಾಗುವಳಿ ಮಾಡುತ್ತಿದ್ದಾರೆ.

**Mr. SPEAKER.**—I would suggest to the Hon'ble Member to clarify, whether he supports or opposes the Bill. I would like to know whether he supports or opposes this Bill for these reasons.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನೇ ಹೇಳುತ್ತಿದ್ದೇನೆ. ತಾವು ಖ್ಯಾತರಾದ ನ್ಯಾಯವಾದಿಗಳಾಗಿದ್ದೀರಿ. ಆದುದರಿಂದಲೇ ಅನುಕೂಲ ಪ್ರತಿಕೂಲ ವಾದಗಳನ್ನು ನಾನು ಹೇಳುತ್ತಿದ್ದೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಿಮ್ಮ ಕಾಂಗ್ರೆಸ್ ಪಕ್ಷದಲ್ಲಿ ನೀವು ಕಾಲು ಶತಮಾನದವರೆಗೆ ನೀವೇ ರಾಜ್ಯಭಾರ ಮಾಡುತ್ತೀರಿ ನಿಮಗೆ ಯಾರು ಬರೆದು ಕೊಟ್ಟಿದ್ದಾರೆ ? ನಮ್ಮ ಮೈಸೂರು ರಾಜ್ಯದ ಎರಡು ಕೋಟಿ 35 ಲಕ್ಷ ಪ್ರಜೆಗಳು ಎಣ್ಣೆಯಲ್ಲಿ ಬಿದ್ದ ಹುಳಗಳ ಹಾಗೆ ಕಷ್ಟಪಡುತ್ತಿದ್ದಾರೆ ಆದ್ದರಿಂದ ಗೋವಿನ ಪದ್ಯದಲ್ಲಿ ಹೇಳಿದ ಹಾಗೆ—

"ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು"

ನೀವು ಅನುಸರಿಸಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—"ಹಿಂದೆ ಬಂದರೆ ಒದೆಯಬೇಡ,
ಮುಂದೆ ಬಂದರೆ ಹಾಯಬೇಡ" ಎಂದು ಸಹ ಆ ಹಧ್ಯದಲ್ಲಿ ಹೇಳಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಕಂದಾಯ ಮಂತ್ರಿಗಳು ಯುಪಕರಾಗಿದ್ದಾರೆ. ಬಡವರು, ರೈತರು, ಕಾರ್ಮಿಕರು, ಹಿತಚಿಂತಕರಾಗಿದ್ದಾರೆ. ಕಲಿಯುಗದ ದಾನಶೂರಕರ್ಣರಾಗಿದ್ದಾರೆ. ಭೀಮನಂತೆ ಬಲಶಾಲಿಯಾಗಿದ್ದಾರೆ. ಬನವಣ್ಣನವರ ಹಾಗೆ ದೀನದಲಿತರ ಉದ್ಧಾರ ಮಾಡತಕ್ಕವರಾಗಿದ್ದಾರೆ. ಅಂಥವರು ಕುಂಟನೆಪ ಹೇಳಿ ಆ ಕಡೆ ಬೊಟ್ಟು ತೋರಿಸುವುದು ನಿಜವಾಗಿಯೂ ಅವರಿಗೆ ಮರ್ಯಾದೆ ತರುವುದಿಲ್ಲ. ಈ ಮೊದಲು ಮಾತನಾಡಿದ ನನ್ನ ಸ್ನೇಹಿತರು ಹೇಳಿದಹಾಗೆ ಈ ಅಧಿವೇಶನ ಮುಗಿಯುವದರೊಳಗಾಗಿ ಈ ಕಾನೂನನ್ನು ಜಾರಿಗೆ ತರುತ್ತೀರಿ ಎಂದು ನಾನು ಭಾವಿಸುತ್ತೇನೆ. ನಮ್ಮ ಸರಕಾರ ತನ್ನ ಪ್ರಭಾವ, ಶಕ್ತಿ ಕಳೆದುಕೊಂಡದ್ದು ನಿಜವಾಗಿಯೂ ದುಃಖಕರ ಸಂಗತಿ. ಇನ್ನು ಯಾವ ಕಾರಣದಿಂದಲೂ ತಡಮಾಡದೆ ಈ ಕಾನೂನನ್ನು ಜಾರಿಗೆ ತರಬೇಕು. ಈ ಕಾನೂನು ಜಾರಿಗೆ ಬರುವುದು ತಡವಾದುದರಿಂದ ನನ್ನ ತಾಲ್ಲೂಕಿನಲ್ಲಿ 5,000 ಎಕರೆ ಜಮೀನು ಪ್ರಂಡುಪೋಕರಿಗಳ ಕೈಯಲ್ಲಿ ಹೋಗಿದೆ. ಮರಗಳನ್ನು ಕಡಿದು ಅಲ್ಲ ಸಾಗುವಳಿ ಮಾಡುತ್ತಿದ್ದಾರೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಆರ್ಡರ್ ಮೇರೆ ರಾಜ್ಯದ ಮಂತ್ರಿಗಳು ಸ್ಟೇ ಆರ್ಡರ್ ಕೊಡುತ್ತಾರೆ.

ಇದು ನ್ಯಾಯವೇ ? ಭೂಮಿ ಭೂಪಾಲರಿಗೆ, ಅದು ಬಡವರಿಗೆ ದೊರಕುತ್ತದೆಯೇ ? ನಿಮ್ಮದು ತತ್ವವಿರುದ್ಧವಾದಂಥ, ಒಂದಕ್ಕೊಂದಕ್ಕೆ ಎದುರಾದಂಥ ನಡೆವಳಿಕೆ. ಇವತ್ತು ನೀವು ಪೀಠದಾನ ಬೇಕೆನ್ನುತ್ತೀರಿ. ನೀವು ಒಂದು ಭರವಸೆ ಕೊಟ್ಟರೆ ಒಪ್ಪುವುದಕ್ಕೆ ತಯಾರಿದ್ದೇನೆ, ಇಲ್ಲದೆ ಹೋದರೆ, ಒಂದೇ ಒಂದು ಶಬ್ದದಲ್ಲಿ ಹೇಳುವುದಾದರೆ ನಿಮ್ಮಿಂದ ಭೂಸುಧಾರಣೆ ಜಾರಿಗೆ ತರುವುದಕ್ಕೆ ಶಕ್ತಿ ಇಲ್ಲ. ನಿದಾನಮಾಡಿದರೆ ಅದರಿಂದ ಜನತೆಗೆ ಒಳ್ಳೆಯದಾಗುವುದಿಲ್ಲ, ಪ್ರತಿಫಲ ದೊರಕುವುದಿಲ್ಲ. ನಿಮ್ಮ ಮಂತ್ರಿಮಂಡಲದಲ್ಲಿ ಸಾಮರಸ್ಯವಿಲ್ಲ, ಒಬ್ಬರೊಬ್ಬರು ಮಾಡತಕ್ಕಂಥ ಕೆಲಸದಲ್ಲಿ ಹೊಂದಾಣಿಕೆ ಇಲ್ಲ. ನೀವು ಒಂದು ಆರ್ಡರ್ ಮಾಡಿದರೆ, ಮತ್ತೊಬ್ಬ ಮಂತ್ರಿಗಳು ಅದೇ ವಿಚಾರದಲ್ಲಿ ಇನ್ನೊಂದು ಆರ್ಡರ್ ಮಾಡುತ್ತಾರೆ. ಬಡವರಿಗೆ ಒಳ್ಳೆಯದಾಗಬೇಕು, ನಿಮ್ಮ ಹೆಸರು ಆ ಚಂದ್ರಾರ್ಕವಾಗಿ ಉಳಿಯಬೇಕೆದಿದ್ದರೆ ಭೂಸುಧಾರಣೆ ಜಾರಿಗೆ ತನ್ನಿ. ಈ ಮಸೂದೆಯನ್ನು ಒಪ್ಪುವುದಕ್ಕೆ ಮುಂಚೆ, ನನಗೆ ಸರ್ಕಾರ ಒಂದು ಭರವಸೆ ಕೊಡುವುದು ಒಳ್ಳೆಯದು. ಇದರ ಮುಂದುವರಿಕೆಯಿಂದ ದೇಶಕ್ಕೆ ಅನ್ಯಾಯವಾಗಿದೆ, ತೊಂದರೆಯಾಗಿದೆ. ನಾನು ಈ Mysore Tenancy Amendment, Bill 1963ನ್ನು ಒಪ್ಪಬೇಕೇ ಬಿಡಬೇಕೇ ಎಂಬ ಸಂದಿಗ್ಧದಲ್ಲಿದ್ದೇನೆ. ಅದಕ್ಕೋಸ್ಕರ ನಾನು ಒಪ್ಪಲಿ, ಬಿಡಲಿ, ಭೂಸುಧಾರಣೆಯ ಕಾನೂನನ್ನು ಏಪ್ರಿಲ್ 15 ,ರೊಳಗೆ ನಾವು ಏಳುವುದಕ್ಕೆ ಮುಂಚೆ ಪರಿಶೀಲಿಸಿ, ಅದರಲ್ಲಿರತಕ್ಕಂಥ ತೊಡರುಗಳು, ರೋಗರುಜಿನಗಳು, ದುರ್ದೋಷಗಳು ಎಲ್ಲವನ್ನು ಒಳಹೊಕ್ಕು ನೋಡಿ, ಡಯಾಗ್‌ನೈಸ್ ಮಾಡಿ, ಅದಕ್ಕಿರುವ ಕಾಹಿಲೆ ವಾಸಿಮಾಡಿ, ಬಡವರಿಗೆ ಭೂಮಿ ದೊರಕುವಂತೆ ಮಾಡುತ್ತೀರ ಎಂದು ಹೇಳಿದರೆ, ಈ ಬಿಲ್ಲನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮಿ, ಈ 1963ನೇ ಇಸವಿ ಮೈಸೂರು ಟೆನೆನ್ಸಿ ಕಾನೂನು ತಿದ್ದುಪಡಿ ಮಸೂದೆಯನ್ನು ಬಹಳ ತೀವ್ರವಾಗಿ ವಿರೋಧಿಸುತ್ತಾ, ಈ ವಿಷಯದಲ್ಲಿ ಎರಡೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 15 ವರುಷಗಳು ಆದುವು. ಈ ಭೂಸುಧಾರಣೆ ಅತಿ ಮುಖ್ಯವಾಗಿ ಜರೂರಾಗಿ ಆಗಬೇಕಾದಂಥ ಒಂದು ದೊಡ್ಡ ಕೆಲಸ. ಇದು ಆಗಬೇಕೆಂದು ಹೇಳಿ ಅನೇಕ ಪ್ರಯತ್ನಗಳು ನಡೆದಿವೆ. ತತ್ವಶಃ ಇದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ರಾಜ್ಯದಲ್ಲಿ ನಾವು ಅನೇಕ ವೇಳೆ ಆಂದೋಳನ ಕೂಡ ಈ ಸಂದರ್ಭದಲ್ಲಿ ಮಾಡಬೇಕಾಯಿತು. ಕಾಗೋಡು ಹೋರಾಟದ ನಂತರ ಒಂದು ಹರುಕು ಮುರುಕು ಗೇಣಿ ಕಾನೂನನ್ನು ರಾಜ್ಯ ಸರ್ಕಾರ ಜಾರಿಗೆ ತಂದಿತು. ಅದಾದಮೇಲೆ, ಕರ್ನಾಟಕ ರಾಜ್ಯವಾದ ಮೇಲೆ, ಶ್ರೀ ಮಾರ್ ಜಿತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಏರ್ಪಾಡಾಗಿ, ಆ ಸಮಿತಿ ವರದಿನಲ್ಲಸಿತು. ಅದಾದ ಮೇಲೆ ಒಂದು ಮಸೂದೆ ಬಂದು, ಒಂದು ದೊಡ್ಡ ಜಂಟಿ ಸೆಲೆಕ್ಟ್ ಸಮಿತಿ ಏರ್ಪಾಡಾಗಿ, ಕಾನೂನಾಗಿ ಎಲ್ಲಾ ಆಯಿತು. ಅದು ಕಾನೂನಾಗಿ ಕೂಡ ಇವತ್ತು ಇದೆ.

Mr. SPEAKER.—The time allotted for this Bill is over ; I extend it by twenty minutes.

Sri S. GOPALA GOWDA.—Thank you.

Mr. SPEAKER.—Not for you ; but for the whole Bill.

ಶ್ರೀ ಎಸ್. ಗೋಪಾಲ ಗೌಡ.—ಈ ಕಾನೂನನ್ನು ರಾಜ್ಯ ಸರ್ಕಾರ ಜಾರಿಗೆ ಕೊಡಲಲ್ಲ. ಕಳೆದ ವರ್ಷ ಕೂಡ ಒಂದು ತಿದ್ದುಪಡಿತಂದಿತು. ಈಗಿರುವ ಪರಿಸ್ಥಿತಿ ಮುಂದುವರಿಸಿಕೊಂಡು ಹೋಗಬೇಕು ಅನ್ನತಕ್ಕಂಥ ಒಂದು ತಿದ್ದುಪಡಿಯನ್ನು ನಾವು ಒಪ್ಪಿಕೊಂಡಿದ್ದೆವು. ಪುನಃ ಅದೇ ರೀತಿಯಲ್ಲಿ ಮುಂದುವರಿಯಬೇಕೆಂದು ಮತ್ತೆ ತಿದ್ದುಪಡಿಯನ್ನು ತಂದಿದ್ದಾರೆ. ಇದು ಬಹಳ ದುರ ದೃಷ್ಟಕರವಾದ ವಿಷಯ. ಕೇಂದ್ರ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಕ್ಷವಾಗಿದ್ದು, ಇಂಥ ಮುಖ್ಯವಾದ ಒಂದು ಸೂಧಾರಣೆಯ ಕಾನೂನನ್ನು ಜಾರಿಗೆ ತರುವ ವಿಷಯದಲ್ಲಿ ಏನೇ ರಾಜ್ಯಾಂಗದ ವಿರೋಧ, ಅಡ್ಡಿ ಬಂದಿದೆಯೆಂದು ಹೇಳುತ್ತಾರೆ. ಉಚ್ಚ ನ್ಯಾಯಾಲಯ, ಶ್ರೇಷ್ಠ ನ್ಯಾಯಾಲಯ ತೀರ್ಮಾನ ಕೊಟ್ಟ ಮೇಲೂ ಕೂಡ, ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡದೆ ಇರುವುದು, ಅವರಿಗೆ ರೈತನ ಬಗ್ಗೆ ಹಾಗೂ ಭೂಸುಧಾರಣೆಯ ಬಗ್ಗೆ ಇರತಕ್ಕಂಥ ದ್ವಂದ್ವ, ತಾತ್ಸಾರ ಎತ್ತಿ ತೋರಿಸತಕ್ಕಂಥ ದೊಡ್ಡ ಸಾಕ್ಷ್ಯವಾಗಿದೆ. ಗುಲ್ಜಾರಿಲಾಲ್ ನಂದಾರವರು, ಭೂಸುಧಾರಣೆಗಳು ಇನ್ನೂ ತೀವ್ರವಾಗಿ ಆಗಬೇಕು ಎಂದು ಹೇಳುತ್ತಾರೆ. ಆದರೆ ಕಾಂಗ್ರೆಸ್ ನಲ್ಲಿರತಕ್ಕಂಥ ದೊಡ್ಡ ದೊಡ್ಡ ಜಮೀನುದಾರರು ತಮ್ಮ ಪ್ರಭಾವವನ್ನು ಅನುಚಿತವಾಗಿ ಸರ್ಕಾರದ ಮೇಲೆ ಮತ್ತು ಸದಸ್ಯರ ಮೇಲೆ ಬೀರಿ, ಈ ಪರಿಸ್ಥಿತಿ ಹೀಗೆಯೇ ಇರಲಿ, ಹೀಗೆಯೇ ಮುಂದುವರಿಯಲಿ ಎಂದು ಒಂದು ದೊಡ್ಡ ಸಂಚನ್ನು ನಡೆಸಿಕೊಂಡು ಬರುತ್ತಾ ಇದ್ದಾರೆ. ಈ ವೇಳೆಯಲ್ಲಿ ಈ 15 ವರ್ಷಗಳಲ್ಲಿ ಬಹಳ ಜನ ಗೇಣಿದಾರ ರೈತರು ತಮ್ಮ ಮನೆ ಮಠಗಳನ್ನು ಕಳೆದುಕೊಂಡು, ಜಮೀನಿನಿಂದ ಹೊರಗೆ ಹಾಕಲ್ಪಟ್ಟ, ಬಲಾತ್ಕಾರವಾಗಿ ಹೊರಗೆ ಹೋಗುವಂಥ ಪರಿಸ್ಥಿತಿ ಬಂದಿದೆ? ಅವರು ಇವತ್ತು ಬಿಕ್ಷೆ ಬೇಡುವ ಪರಿಸ್ಥಿತಿ ಬಂದಿದೆ. ಈ ಮನೂದೆ ಜಾರಿಗೆ ಕೊಡುವುದು ತಡವಾದಷ್ಟೂ, ಪ್ರತಿದಿವಸ ಈ ಸಮಸ್ಯೆ ಉಲ್ಬಣವಾಗಿ ಬೇರೆ ಬೇರೆ ರೂಪವನ್ನು ತಾಳುತ್ತಿದೆ. ಅದನ್ನು ಬಗೆಹರಿಸದೆ ಮಾನ್ಯಮಂತ್ರಿಗಳು, ಈ ತಿದ್ದುಪಡಿಯನ್ನು ತರಬೇಕಾಗಿದೆಯೆಂದು ಹೇಳುತ್ತಾರೆ. ಪ್ಲಾನಿಂಗ್ ಕಮಿಷನ್ನಿನವರು ಸೂಚಿಸಿದ್ದಾರೆಂದು ಹೇಳುವುದು ಬಹಳ ಶೋಚನೀಯವಾದ ವಿಷಯ. ಒಂದು ಕಾನೂನನ್ನು ಈ ಮಾನ್ಯ ಸಭೆ ಕಾನೂನಾಗಿ ಮಾಡಿದೆ. ಸರ್ಕಾರ ಅದನ್ನು ಯಾಪ ಕಾರಣಕ್ಕಾಗಿ ಜಾರಿಗೆ ಕೊಡುತ್ತಿಲ್ಲ? ಅದು ಹೀಗೆಯೇ ಮತ್ತೆ ತಿದ್ದುಪಡಿಗಾಗಿ ಬರುತ್ತಿದೆ. ಇದು ಏನು ತೋರಿಸುತ್ತಿದೆಯೆಂದರೆ ಈ ದೇಶದಲ್ಲಿ ಪ್ರಜಾಭುತ್ವದಲ್ಲಿ ಯಾರಿಗಾದರೂ ಏನಾದರೂ ಅಲ್ಪಸ್ವಲ್ಪ ವಿಶ್ವಾಸ ಉಳಿದಿದ್ದರೆ—(ಬುದ್ಧಿವಂತರಿಗೆ ಕೂಡ) ವಿಚಾರಪರರೆನಿಸಿಕೊಂಡವರಿಗೆ, ಸ್ವಲ್ಪ ವಿಚಾರ ಮಾಡತಕ್ಕಂಥವರಿಗೆ ವಿಶ್ವಾಸವಿದ್ದರೆ, ಅದು ಅವರಿಗೆ ಹೋಗುವುದರಲ್ಲ ಎನೂ ಸಂದೇಹವಿಲ್ಲ. ಮೊದಲೇ ಪ್ರಜಾಭುತ್ವದಲ್ಲ ಅಡ್ಡಿ ಆತಂಕಗಳಿರುತ್ತವೆ ತಡವಾಗುತ್ತದೆ. ತಕ್ಷಣ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಆರ್ಡಿನೆನ್ಸ್ ಬಿಟ್ಟು ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಇಷ್ಟೆಲ್ಲಾ ಕಷ್ಟವಿದ್ದೂ, ಮನೂದೆಮಾಡಿ ಜಾರಿಗೆ ಕೊಡದೆ ಇಷ್ಟು ವಿಳಂಬ ಮಾಡುವುದಾದರೆ ಈ ಮನೂದೆಯಿಂದ ಇನ್ನು ಏನು ಸಾಧಕವಾಗುತ್ತದೆ? ಇದು ಬಹಳ ಮುಖ್ಯವಾದ ಪ್ರಶ್ನೆ. ಇದನ್ನು ಬಹಳ ವಿಷಾದದಿಂದ ವಿರೋಧಿಸಬೇಕಾಗಿದೆ. Status quo ಮುಂದುವರಿಸಬೇಕೆಂದು ಹೇಳುತ್ತಾರೆ. ಇವತ್ತಿನ ದಿವಸ ಹಳ್ಳಿಯಲ್ಲ ಏನು ಪರಿಸ್ಥಿತಿ ಇದೆ? ಅಲ್ಲ ರೈತರಿಗೆ (ಗೇಣಿದಾರರಿಗೆ) ಮತ್ತು ಜಮೀನುದಾರರಿಗೆ ಎಷ್ಟೋ ರೀತಿಯ ವಿವಾದಗಳು ನಡೆಯುತ್ತಾ ಇವೆ; ಎಷ್ಟೋ ಜನರ ಮೇಲೆ ಬಲಾತ್ಕಾರ ನಡೆಯುತ್ತಾ ಇದೆ. ಅಲ್ಲ ಅಷ್ಟು ಕಳವಳಕರ ಪರಿಸ್ಥಿತಿ ಉಂಟಾಗಿದೆ. ಅದನ್ನೆಲ್ಲಾ ಅರ್ಥಮಾಡಿಕೊಳ್ಳ ದೇನೇ ಹೆಚ್ಚು ಬೆಳೆ ಬೆಳೆಯಬೇಕು, ದೇಶದಲ್ಲ ಹೆಚ್ಚು ಆಹಾರ ಉತ್ಪಾದನೆ ಮಾಡಬೇಕು ಎಂಬ ತಮ್ಮ ದೊಡ್ಡ ಮಾತುಗಳೆಲ್ಲಾ ಈ ಸನ್ನಿವೇಶದಲ್ಲ ಅರ್ಥ ಶೂನ್ಯ ಮತ್ತು ವಿಫಲ. ಮಾನ್ಯ ಸಚಿವರು ಒಂದು ಮಾತನ್ನು ಹೇಳಿದರು. ಹಾಗೆ ಹೇಳುವುದರ ಜೊತೆಗೆ ಸ್ವಲ್ಪ ಮಾತುಗಳನ್ನು ಮಧ್ಯೇ ಮಧ್ಯೇ ಜೋಡಿಸಿಬಿಡುತ್ತಾರೆ: "ಚೈನಾ ನಮ್ಮ ಮೇಲೆ ಧಾಳಿ ಮಾಡಿಬಿಟ್ಟಿತು. ಇಲ್ಲದಿದ್ದರೆ ರಾಜ್ಯಾಂಗ ತಿದ್ದುಪಡಿಯಾಗಿ ಭೂಸುಧಾರಣೆ ಆಗುತ್ತಾ ಇತ್ತು" ಎಂದು. ಚೈನಾ ಧಾಳಿ ಮಾಡಿರಬಹುದು.

---

## Leave of Absence.

Mr. SPEAKER.—Now, it is 3 o'clock. Before we adjourn, I want to bring a matter to the notice of the House which I forget to do.

I have received a letter from Srimathi Murari Kamalamma, a Member of the Assembly, requesting leave of absence from the House for the current session owing to ill-health.

(MR. SPEAKER)

**Is it the pleasure of the House that permission be granted to Smt. Kamalamma for being absent from all the meetings of the Assembly during the current session ?**

**MEMBERS.**—Yes.

*The motion was adopted.*

**MR. SPEAKER.**—Permission to remain absent is granted.
The House will now rise and meet after half-an-hour.

---

*The House adjourned for recess at Three of the Clock and re-assembled at Thirty Minutes past Three of the Clock.*

---

[MR. SPEAKER in the Chair.]

## MYSORE TENANCY LAWS (AMENDMENT) BILL, 1963.

*debate continued)*

ಶ್ರೀ ಎಸ್. ಗೋಪಾಲಗೌಡ.—ಚೀಣಾ ಧಾಳಿಯಿಂದ ಈಗ ನಮ್ಮ ರಾಜ್ಯಾಂಗವನ್ನು ತಿದ್ದುಪಡಿಮಾಡಲು ಅವಕಾಶ ಇಲ್ಲ, ಈ ತಿದ್ದುಪಡಿಯಮ್ನು ಕಳೆದ ಡಿಸೆಂಬರಿನಲ್ಲೇ ಮಾಡಬೇಕೆಂದಿದ್ದರು, ಆದರೆ ಅದು ಸಾಧ್ಯವಾಗಲಿಲ್ಲವೆಂಬುದಾಗಿ ಮಾನ್ಯ ಮಂತ್ರಿಗಳು ತಿಳಿಸಿದರು. ಈಗಾಗಲೇ ದೇಶದಲ್ಲಿ ಅನೇಕರು ಈ ತುರ್ತುಪರಿಸ್ಥಿತಿ ದೇಶದಲ್ಲಿ ಹೀಗೇ ಇನ್ನೂ ಅನಿರ್ದಿಷ್ಟಕಾಲದವರೆಗೂ ವ ಎಂದುವರಿಯುತ್ತಲೇ ಇರುತ್ತದೆಂದು ಹೇಳುತ್ತಿದ್ದಾರೆ. ಹೀಗೆ ಈ ತುರ್ತುಪರಿಸ್ಥಿ ಮುಂದುವರಿಯುತ್ತಿದ್ದರೆ ನಮ್ಮ ರಾಜ್ಯಾಂಗಕ್ಕೆ ತಿದ್ದುಪಡಿಮಾ ಲು ಸಾಧ್ಯವಿರುವುದಿಲ್ಲ. ಆ ತಿದ್ದುಪಡಿಮಾಡದಿದಾ ಆ ಶಾಸನ ಜಾರಿಗೆ ಬರುವುದಕ್ಕೆ ಸಾಧ್ಯವಿಲ್ಲವೆಂದು ಅರ್ಥವಾಗುತ್ತದೆ, ಹೀಗಾದರೆ ಪರಿಸ್ಥಿತಿ ಬಹಳ ಹದಗೆಡುತ್ತದೆ. ಆದಕಾರಣ ನಮ್ಮ ಮಾನ್ಯ ರೆವಿನ್ಯೂ ಸಚಿವರಿಗೆ ಕೇಂದ್ರದಲ್ಲಿ ಒಂದು ಹೆಚ್ಚಿನ ಪ್ರಧಾನಿಯೆಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಮೇಲಾಗಿ ಈ ಕೆಲಸವು ಮಾನ್ಯ ಮಂತ್ರಿಗಳ ಕರ್ತವ್ಯದಲ್ಲಿ ಒಂದು ಅತಿ ಮುಖ್ಯವಾದ ಕರ್ತವ್ಯವಾಗಿರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಅವರು ತಮ್ಮ ಪ್ರಭಾವವನ್ನು ಆ ಕೇಂದ್ರಸರ್ಕಾರದ ಮೇರೆ ಬೀರಿ ಆ ಭೂಸುಧಾರಣಾ ಶಾಸನವನ್ನು ಬೇಗ ಜಾರಿಗೆ ಬರುವಂತೆ ಮಾಡಬೇಕೆಂದು ಹೇಳುತ್ತೇನೆ. ಆದರೆ ಈ ಭೂಸುಧಾರಣೆ ಮಸೂದೆ ಇಲ್ಲಿಗೆ ಹತ್ತು ವರ್ಷಗಳ ಹಿಂದೆಯೇ ಶಾಸನವಾಗಿ ಜಾರಿಗೆ ಬರಬೇಕಾಗಿತ್ತು. ಆ ರೀತಿ ಆಗಿದ್ದರೆ ಈ ಹೊತ್ತು ಈ ಚೀನಾ ಧಾಳಿಮಾಡಲು ಅವಕಾಶವೇ ಇರುತ್ತಿರಲಿಲ್ಲವೆಂದು ಹೇಳುತ್ತೇನೆ. ಈ ದಿವಸ ನಾವು ಹೊರಗಡೆಯಿಂದ ಒಂದು ನೂರುಕೋಟಿ ರೂಪಾಯಿಗಳ ಆಹಾರ ಸಾಮಗ್ರಿಗಳನ್ನು ಏನು ತರಿಸುತ್ತಿದ್ದೇವೆ ? ಈ ಪರಿಸ್ಥಿತಿ, ಈ ಅವಶ್ಯಕತೆ ನಮಗೆ ಈ ಶಾಸನ ಜಾರಿಗೆ ಬಂದಿದ್ದರೆ ಇರುತ್ತಿರಲಿಲ್ಲ. ಆಗಲಿ ಸದ್ಯಕ್ಕೆ ಈ ಮಾತು ಬೇರೆಆಯಿತು. ನಾವು ಈ ಭೂಸುಧಾರಣಾ ಶಾಸನದ ವಿಚಾರವನ್ನು ಮೈಸೂರು ಸರ್ಕಾರಕ್ಕೆ ಈ ಹಿಂದೆ ಕಳೆದುಹೋದ ಅಧಿವೇಶನದಲ್ಲಿ ಒಂದು ಅವಿಶ್ವಾಸ ನಿರ್ಣಯವನ್ನು ತಂದಿದ್ದಾಗ ಅದರಲ್ಲಿ ಸೇರಿಸಿದ್ದೆವು. ಆಗ ಈ ವಿಚಾರ ಇಲ್ಲಿ ಚರ್ಚೆ ಸಹ ಆಯಿತು. ಆದರೆ ಆಕಾಲದಲ್ಲಿ ಮಾನ್ಯ ರೆವಿನ್ಯೂಮಂತ್ರಿಗಳು ಸಭೆಯಲ್ಲಿ ಹಾಜರು ಇರಲಿಲ್ಲ. ಆದಾಗ್ಯೂ ಅವರು ಉತ್ತರ ಕೊಡುವಕಾಲದಲ್ಲಿ ಭೂಸುಧಾರಣೆಯ ವಿಚಾರವನ್ನು ಯಾರೂ ಏನೂ ಅಷ್ಯಾಗಿ ಪ್ರಸ್ತಾಪಮಾಡಲಿಲ್ಲ, ಏನೋ ಇರಲಿ ಎಂದು ಸುಮ್ಮನೆ ಸೇರಿಸಿರುತ್ತಾರೆ ಎಂದು ಮಾತನಾಡಿದ್ದಾರೆ. ಹಾಗೆ ಅವರು ಹೇಳಿದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ. ಆದರೆ ಮಾನ್ಯ ರೆವಿನ್ಯೂ ಸಚಿವರಿಗೆ ಅವರು ಹುಟ್ಟಿದಾರಭ್ಯದಿಂದಲೂ ಈ ಭೂಸುಧಾರಣೆಯ ವಿಚಾರ ಇಲ್ಲಿ ಏನಾಗಿದೆ ಎಂಬುದು ಅವರಿಗೂ ಚೆನ್ನಾಗಿ ಗೊತ್ತಿದೆ. ಮೇಲಾಗಿ ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಬಹಳ ನಿಧಾನಮಾಡಿದ್ದಾರೆಂಬ ಅಂಶವನ್ನು ಅವರು ಒಪ್ಪಿಕೊಳ್ಳಲೇಬೇಕು. ಈ ವಿಚಾರವಾಗಿ ಪ್ಲಾನಿಂಗ್ ಕಮಿಷನ್ನಿನವರಿಂದಲೂ ಬಹಳ ತಡವಾಗಿದೆ ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ಈ ವಿಚಾರದಲ್ಲಿ ತತ್ಸಾರಮಾಡಿರತಕ್ಕ ರಾಜ್ಯಗಳೂ ಕೆಲವು ಇವೆ. ಆದರೆ ಇದು ಖಂಡಿತವಾಗಿಯೂ ನಮ್ಮ ರಾಜ್ಯಕ್ಕೆ ಅವಮಾನಕರವಾದಂಥಾ ವಿಚಾರವಾಗಿದೆ. ಈಗಲಾದರೂ ಸರ್ಕಾರ ಇದನ್ನು ಬೇಗ ಪರಿಹರಿಸಬೇಕು. ನನ್ನ ಕ್ಷೇತ್ರದಲ್ಲಿ ಹೊಸನಗರ–ತೀರ್ಥಹಳ್ಳಿ ಮುಂತಾದ ಅನೇಕ ಸ್ಥಳಗಳಲ್ಲಿ ಈ ಗೇಣಿದಾರರ ಶಾಸನ ಜಾರಿಯಲ್ಲದ್ದರೂ ರೈತರಿಗೇನೂ ಪ್ರಯೋಜನವಾಗುತ್ತಿಲ್ಲ. ಈ ಹಿಂದೆ

ವಿಶೇಷ ತಹಶೀಲ್‌ದಾರರು ಇಲ್ಲದೆ ಈ ಗೇಣಿ ಕೇಸುಗಳನ್ನೇ ವಿಚಾರಣೆ ಮಾಡುವವರಿರಲ್ಲಿಲ್ಲ. ಇತ್ತೀಚೆಗೆ ಬಹಳ ಒತ್ತಾಯಗಳು ಅನೇಕಕಡೆಗಳಿಂದ ಬಂದುದರಿಂದ ತಹಶೀಲ್ದಾರರೇ ಈಗ ಅವರು ಈ ಕೇಸುಗಳ ವಿಚಾರಣೆ ಮಾಡಬೇಕೆಂದು ಸರಕಾರ ಆಜ್ಞೆಮಾಡಿದೆ. ದೇಶದಲ್ಲರತಕ್ಕ ಗೇಣೀದಾರರ ಈ ಸಂದಿಗ್ಧ ಪರಿಸ್ಥಿತಿ ಬೇಗ ಹತೋಟಿಗೆ ಬಾರದಿದ್ದರೆ ಮುಂದೆ ಕೆಟ್ಟಪರಿಣಾಮಗಳು ಆಗುವುದು ಖಂಡಿತ. ಮೇಲಾಗಿ ದೇಶದಲ್ಲರತಕ್ಕ ಗೇಣೀದಾರರಿಗೂ-ರೈತರಿಗೂ ಭೂಹೀನ ರೈತರಿಗೂ ಒಂದು ಸಂಘಟನಾ ಶಕ್ತಿ ಬೇರೆ ಇಲ್ಲ. ಈ ಒಂದು ಕಾರಣದಿಂದ ಸರ್ಕಾರದವರು ಅವರುಗಳಿಗೆ ಸುಮ್ಮನೆ ಏನೋ ಒಂದು ಆಶ್ವಾಸನ ಕೊಟ್ಟುಕೊಂಡು ಈ ಪರಿಸ್ಥಿತಿಯನ್ನು ಮುಂದೆ ಮುಂದಕ್ಕೆ ತಳ್ಳಿಕೊಂಡು ಬರುತ್ತಿದ್ದಾರೆ. ಆದರೆ ಎಂಥವನಿಗಾದರೂ ಒಂದು ಸಹನೆ ಎಲ್ಲಯವರಿಗಿರುತ್ತದೆ? ಸಹನೆ ಮೀರಿದರೆ ಬಹಳ ಕಷ್ಟವಾಗುತ್ತದೆ ಎಂದು ಈಗಲೇ ನಾನು ಸರ್ಕಾರದವರಿಗೆ ಎಚ್ಚರಿಕೆ ಕೊಡಬಯಸುತ್ತೇನೆ. ಆದರೆ ಆಡಳಿತ ಪಕ್ಷದಲ್ಲಿ ಸಂಖ್ಯಾ ಬಲವಿದೆ ಎಂದು ಪಾಸ್‌ಮಾಡಿ ಕಾಲತಳ್ಳುತ್ತಾ ಬಂದರೆ ಜನರು ಏಕೋಪಕ್ಕೆ ತಿರುಗದೆ ಅವರಿಗೆ ಬೇರೆ ಮಾರ್ಗವೇ ಇಲ್ಲ. ಅವರು ನೇರಕ್ರಮಗಳನ್ನು ಕೈಗೊಳ್ಳಲೇಬೇಕಾಗುತ್ತದೆ. ಶ್ರೀ ಮುಕ್ಕಣ್ಣಪ್ಪನವರು ಹೇಳಿದಹಾಗೆ ದೇಶದಲ್ಲ ಅನೇಕರು ಭೂಹೀನರು ಈಗ ಸಾಗುವಳಿಮಾಡುತ್ತಿದ್ದಾರೆ ಅದರೆ ಅವರಮೇಲೆ ಈಗ T. T. ಹಾಕಿ ಅವರ ಮನೆ ಮಠ ಹರಾಜು ಮಾಡಿಸಬೇಕೆಂಬ ಉದ್ದೇಶ ಸರ್ಕಾರದವರಿಗಿದ್ದಂತೆ ಕಾಣುತ್ತಿದೆ. ಯಾವ ಹೆಜ್ಜೆಗಳನ್ನಿಡುತ್ತೇವೆಂದು ನೀವು ಆ ಘನ ಉದ್ದೇಶಗಳನ್ನು ದೇಶದಮುಂದೆ ಇಟ್ಟಿದ್ದೀರಿ ಅಥವಾ ಘೋಷಿಸಿದ್ದೀರಿ? ಈ ಉದ್ದೇಶಗಳಿಗೂ, ಸರ್ಕಾರ ಇವೊತ್ತು ಕೈಗೊಳ್ಳುತಿರುವ ಕ್ರಮಗಳಿಗೂ ಬಹಳ ತದ್ವಿರುದ್ಧವಾದ ಪರಿಣಾಮವುಂಟಾಗುತ್ತದೆ. ಇದರಿಂದ ಒಳ್ಳೆಯದಾಗುವುದಿಲ್ಲವೆಂದು ಹೇಳುತ್ತೇನೆ.

ಈ ಮಸೂದೆಗೆ ಇವೊತ್ತು ನೀವು ತಿದ್ದುಪಡಿಯನ್ನು ಮಾಡಿದರೂ ಕೂಡ ಒಂದು ವರ್ಷಕಾಲ ಕಾಯದೆ, ಆದಷ್ಟುಬೇಗ ರಾಜ್ಯಾಂಗವನ್ನೂ ತಿದ್ದುಪಡಿಮಾಡಿಕೊಂಡು ಭೂಶಾಸನವನ್ನು ಜಾರಿಗೆ ತರಬೇಕು ಮತ್ತು ಕ್ರಾಂತಿಕಾರಕವಾದ ರೀತಿಯಲ್ಲ ಭೂಶಾಸನವನ್ನೂ ತಿದ್ದುಪಡಿಮಾಡುವುದಕ್ಕೆ ಸಾಧ್ಯವಿದ್ದರೆ ಅರೀತಿಮಾಡಿ ಜಾರಿಗೆತರಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ, ಸ್ವಾಮಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಶಿವಪ್ಪನವರು ಈ ಮಸೂದೆಯನ್ನು ವಿರೋಧಿಸುತ್ತ, ಈ ಅಧಿವೇಶನದ ಕೊನೆಯೊಳಗಾಗಿ ಒಂದು emergency legislation ಆದರೂ ತಂದು ಸರ್ಕಾರ ಭೂಸುಧಾರಣೆ ಮಸೂದೆಯನ್ನು ಜಾರಿಗೆ ತರಬೇಕು ಎಂದು ಹೇಳಿದ್ದಾರೆ. ಭೂಸುಧಾರಣೆಯನ್ನೂ ಸಾಧ್ಯವಾದಷ್ಟು ಬೇಗ ಜಾರಿಗೆ ತರಬೇಕು ಎನ್ನುವುದೇ ಪೂರ್ವದಿಂದಲೂ ಸರ್ಕಾರದ ಒಂದು ಆಸೆ ಎಂದು ನಾನು ಪದೇಪದೇ ಹೇಳಿದ್ದೇನೆ. ಆದರೆ ಆ ಕಾರ್ಯವನ್ನೂ ಕಾನೂನು ಕಟ್ಟಳೆಗಳಿಗೊಳಪಟ್ಟು ಮಾಡಬೇಕಾಗಿದೆ. ಸರ್ಕಾರ ಸ್ವಲ್ಪ ತಪ್ಪುದಾರಿಯನ್ನು ತುಳಿದಿದ್ದೇ ಆದರೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಇವೆ. ತಮಗೆಲ್ಲರಿಗೂ ಕೂಡ ಗೊತ್ತಿದೆ ಈಚಿನ ದಿನಗಳಲ್ಲಿ ಎಷ್ಟೊಂದು ಸರ್ಕಾರದ ನಡವಳಿಕೆಗಳು ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ಇವುಗಳು ಮುಂದೆ ಬಂದು ಅದರ ಬಗ್ಗೆ ಜಡ್ಜ್‌ಮೆಂಟನ್ನು ಕೊಡುತ್ತಿದ್ದಾರೆ. ಕೇರಳ ಭೂ ಶಾಸನದ ಬಗ್ಗೆ ಸುಪ್ರೀಂಕೋರ್ಟ್ ಒಂದು ತೀರ್ಮಾನ ಕೊಟ್ಟಮೇಲೆ ನಮ್ಮ ಶಾಸನದ ಗತಿಯೂ ಅದೇ ಆಗುತ್ತದೆ. ರಾಜ್ಯಾಂಗದ 31 (A) ಆರ್ಟಿಕಲ್ ತಿದ್ದುಪಡಿಯಾಗುವವರೆಗೂ ಇದನ್ನು ಜಾರಿಗೆ ತರುವುದು ಅಷ್ಟು ಬುದ್ಧಿವಂತಿಕೆಯಲ್ಲ. ಕೇಂದ್ರಸರ್ಕಾರದ ಮಂತ್ರಿಗಳು ಇಲ್ಲಿ ಬಂದಿದ್ದಾಗ ಅವರೂ ಸಹ ರಾಜ್ಯಾಂಗದ ತಿದ್ದುಪಡಿ ಮಾಡಬೇಕೆಂಬುದನ್ನು ಒಪ್ಪಿಕೊಂಡರು. ಡಿಸೆಂಬರ್ ತಿಂಗಳನಲ್ಲ ಖಾತ್ರಿಯಾಗಿ ಮಾಡುತ್ತೇವೆಂದು ಹೇಳಿದ್ದರು. ಅವರು ಡಿಸೆಂಬರ್ ತಿಂಗಳಿನಲ್ಲ ತಿದ್ದುಪಡಿಯನ್ನು ಮಾಡಿದ್ದರೆ, ನಾವು ಜನವರಿ, ಫೆಬ್ರವರಿ ತಿಂಗಳಿನಲ್ಲಿ ಎಂದರೆ ಮುಂಗಾರುಮಳೆ ಪ್ರಾರಂಭವಾಗುವುದಕ್ಕೆ ಮೊದಲೇ ಭೂ ಸುಧಾರಣೆಯನ್ನು ಜಾರಿಗೆ ತರಬಹುದಾಗಿತ್ತು.

ಯಾವ ರೈತರಿಗೋಸ್ಕರ ಶ್ರೀಮಾನ್ ಶಿವಪ್ಪನವರು, ಗೋಪಾಲಗಾಡರು ಮತ್ತು ಮುಕ್ಕಣ್ಣಪ್ಪನವರೂ, ಮಿತ್ರರೂ ಹೇಳುತ್ತಿದ್ದಾರೆಯೋ ಅಂಥ ರೈತರಲ್ಲಿ ಒಂದು ಆಶಾಭಾವನೆ ಮೂಡಿ ಸಂತೋಷದಿಂದ ಭೂಮಿ ತನ್ನದು ಎನ್ನುವ ಉತ್ಸಾಹವುಂಟಾಗಲಿ ಎನ್ನುವ ಆಸೆ ನನಗೂ ಇದೆ. ನಾನು ಹೇಳಿದ ಹಾಗೆ ಡಿಸೆಂಬರ್‌ನಲ್ಲಿ ರಾಜ್ಯಾಂಗದ ತಿದ್ದುಪಡಿಯಾಗಬೇಕಾಗಿತ್ತು. ಆದರೆ ಡಿಸೆಂಬರ್ ಅಧಿವೇಶನದಲ್ಲಿ ಕೇಂದ್ರಸರ್ಕಾರ ಚೀಣಾ ಯುದ್ಧದ ವಿಷಯದ ಚರ್ಚೆಯಲ್ಲಿ ಕಾಲ ಕಳೆಯಬೇಕಾಯಿತು. ಆದ್ದರಿಂದ ರಾಜ್ಯಾಂಗದ ತಿದ್ದುಪಡಿಯ ಪ್ರಶ್ನೆ ಆಗಬ್ಬಲಿಲ್ಲ. ಸಾಧ್ಯವಾದಷ್ಟು ಬೇಗ ಅಪರ ರಾಜ್ಯಾಂಗಕ್ಕೆ ತಿದ್ದುಪಡಿಯನ್ನು ತಂದು 31(A) ಕಲಮನ್ನು ಬದಲಾವಣೆ ಮಾಡಿದರೆ ತಕ್ಷಣ ನಾವು ಮೈಸೂರು ದೇಶದಲ್ಲ ಭೂ ಸುಧಾರಣೆಯನ್ನು ಜಾರಿಗೆ ತರಬೇಕು ಎನ್ನುವ ಆಸೆಯಿಂದ ಇದ್ದೇವೆ.

(ಶ್ರೀ ಎಂ. ವಿ. ಕೃಷ್ಣಪ್ಪ)

ಶ್ರೀಮಾನ್ ಮುಕ್ಕಣ್ಣಪ್ಪನವರಿಗೆ ಮತ್ತು ಶ್ರೀಮಾನ್ ಗೋಪಾಲಗೌಡರಿಗೆ ನನ್ನ ಉತ್ತರವಿಷ್ಟೆ; ತಮಗಿಂತಲೂ ನನಗೆ ಇದರಲ್ಲಿ ಬಹಳ ಆತುರತೆ ಇದೆ. ನಾನು ವೈಯಕ್ತಿಕವಾಗಿ ಹೇಳುವುದಾದರೆ, ಕೋಲಾರ ಜಿಲ್ಲೆಯಲ್ಲಿ ರೈತರ ಚಳುವಳಿಯನ್ನು ಮಾಡಿದವರು, ಶ್ರೀಮಾನ್ ವೆಂಕಟಗಿರಿಯಪ್ಪನವರಿಗೂ ಈ ವಿಷಯ ಗೊತ್ತು. ಮೈಸೂರು ಸಂಸ್ಥಾನದಲ್ಲಿ ಜೋಡಿ, ಇನಾಂತಿ, ಖಾಯಂಗುತ್ತ ಇರುವುದು ಬಹಳಮಟ್ಟಿಗೆ ಕೋಲಾರ ಜಿಲ್ಲೆಯಲ್ಲಿ ಅದರಲ್ಲಿಯೂ ನನ್ನ ತಾಲ್ಲೂಕಿನಲ್ಲಿ ಎಂದರೆ ಮುಳುಬಾಗಲು ತಾಲ್ಲೂಕಿನಲ್ಲಿರುವ 300 ಗ್ರಾಮಗಳಲ್ಲಿ ಸುಮಾರು 150-160 ಗ್ರಾಮಗಳು ಇನಾಂ, ಜೋಡಿ ಮೊದಲಾದುವು ಆಗಿದೆ. ಅಲ್ಲಿ ಸರ್ವೆ ಸೆಟಲ್‌ಮೆಂಟ್ ಆಗದೆ ಅನೇಕ ರೈತರಿಗೆ ರಕ್ಷಣೆ ಇರಲಿಲ್ಲ. ವಿದ್ಯಾರ್ಥಿಗಳಾಗಿರುವಾಗಲೇ ಶ್ರೀಮಾನ್ ವೆಂಕಟಗಿರಿಯಪ್ಪನವರು ನಾನು ಎಲ್ಲ ಸೇರಿ ರೈತ ಸಂಘಗಳನ್ನು ನಿರೂಪಣೆ ಮಾಡಿಕೊಂಡು ರೈತರಿಗೆ ರಕ್ಷಣೆ ಸಿಕ್ಕಬೇಕು. ಭೂ ಸುಧಾರಣೆ ಬಾರಿಗೆ ಬಂದು ರೈತರು ಜಮೀನಿನ ಒಡೆಯರಾಗಬೇಕೆಂದು ಚಳುವಳಿಯನ್ನು ಪ್ರಾರಂಭ ಮಾಡಿದವರು ನಾವು. ಆಮೇಲೆ ಕಾಗೋಡು ಸತ್ಯಾಗ್ರಹವನ್ನು ಶ್ರೀಮಾನ್ ಗೋಪಾಲಗೌಡರು ಪ್ರಾರಂಭ ಮಾಡಿದರು. ರೈತ ಚಳುವಳಿಯನ್ನು ಪ್ರಾರಂಭಮಾಡಿದ ಕೀರ್ತಿ ಕೋಲಾರ ಜಿಲ್ಲೆಯ ಯುವಕರಿಗೆ ಸೇರಬೇಕು. ಆ ಯುವಕರಲ್ಲಿ ಒಬ್ಬನಾದ ನಾನು ಇಲ್ಲಿ ರೆವೆನ್ಯೂ ಮಂತ್ರಿಯಾಗಿ ಬಂದು ಯಾವ ಕಾರ್ಯಪಾಗ ಬೇಕೆಂದು ಪ್ರಯತ್ನಪಟ್ಟೆವೋ ಅದನ್ನು ತಡ ಮಾಡುತ್ತಿದ್ದೇನೆಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ. ಏನೋ ಬಯ್ಯಬೇಕು ಎಂದು ಬಯ್ಯುವವರಿಗೆ ನಾನೂ ಹೇಳುವುದಕ್ಕಾಗುವುದಿಲ್ಲ. " ಎಲ್ಲಿಯಾದರೂ ಇರು, ಹೇಗಾದರೂ ಇರು, ಆದರೆ ಕನ್ನಡಿಗನಾಗಿರು " ಎಂದು ಒಬ್ಬ ಕವಿ ಹೇಳಿರುವಂತೆ ಶ್ರೀಮಾನ್ ಮುಕ್ಕಣ್ಣಪ್ಪನವರು ಏನಾದರೂ ಬಯ್ಯಲಿ, ಈ ಮಸೂದೆಯನ್ನು ಒಪ್ಪಿಕೊಂಡರೆ ಸಾಕು.

ಭೂಮಿಯನ್ನು ಉಳುವವರಿಗೆ ರಕ್ಷಣೆಬೇಕು ಇದು ರಕ್ಷಣೆಯ ಮಸೂದೆ. ಸಾಧ್ಯವಾದಷ್ಟು ಬೇಗ ಭೂ ಸುಧಾರಣೆಯನ್ನು ತರಬೇಕೆನ್ನುವುದೇ ನಮ್ಮ ಇಷ್ಟ. ಆದರೆ ನಾನು ಹೇಳಿದ ಹಾಗೆ ರಾಜ್ಯಾಂಗ ಬದಲಾವಣೆಯಾದ ಹೊರತು ನಾವು ಏನೂ ಮಾಡುವುದಕ್ಕಾಗುವುದಿಲ್ಲ. ರಾಜ್ಯಾಂಗಕ್ಕೆ ಸಾಧ್ಯವಾದಷ್ಟು ಬೇಗ ತಿದ್ದುಪಡಿ ತರಬೇಕು, ಶ್ರೀಮಾನ್ ಕೃಷ್ಣಪ್ಪನವರಿಗೆ ಕೇಂದ್ರದಲ್ಲಿ ಪ್ರಭಾವ ಏದೆ ಎಂದು ಹೇಳಿದರು. ನನ್ನ ಪ್ರಭಾವವನ್ನೂ ಪೂರಾ ಉಪಯೋಗಿಸುತ್ತಿದ್ದೇನೆ. ಆದರೆ ಚೀರ್ಣಾ ದೇಶದವರ ಮುಂದೆ ನಮ್ಮ ಪ್ರಭಾವ ನಡೆಯುವುದಿಲ್ಲ. ಅದರಿಂದ ಸ್ವಲ್ಪ ತಡವಾಗಿದೆ. ಸಾಧ್ಯವಾದಷ್ಟು ಬೇಗ ರಾಜ್ಯಾಂಗಕ್ಕೆ ತಿದ್ದುಪಡಿ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ. ಬೇಗ ಮಾಡಬಹುದು ಎನ್ನುವ ನಂಬಿಕೆ ಇದೆ.

ಶ್ರೀಮಾನ್ ಮುಕ್ಕಣ್ಣಪ್ಪನವರು ಮಾತನಾಡುತ್ತ ಒಂದು ವಿಷಯವನ್ನು ಹೇಳಿದರು. ಅವರ ತಾಲ್ಲೂಕಿನಲ್ಲಿ 300 ಜನ ರೈತರಿಗೂ ಶ್ರೀಮಾನ್ ರಾಜಯ್ಯನವರು eviction order ಕೊಟ್ಟಿದ್ದು ದಕ್ಕೆ ನಾನು stay order ಕೊಟ್ಟಿದ್ದೇನೆಂದು ಹೇಳಿದರು. ರೈತರನ್ನು evict ಮಾಡಬೇಡಿ, ಅವರನ್ನು ಒಕ್ಕಲೆಬ್ಬಿಸಬೇಡಿ ಎಂದು ನಾನ ಸ್ಟೇ ಆರ್ಡರ್ ಕೊಟ್ಟಿದ್ದೇನೆ. ಅವರೆಲ್ಲ ಬಣಜಾರರು, ಲಂಬಾಣಿಗಳು, ಎಲ್ಲಿಂದಲೋ ಬಂದಿದ್ದಾರೆ, ಅವರಿಗೆ ಏನು ಕರುಣೆ ತೋರಿಸುತ್ತೀರಿ ಎಂದು ಹೇಳಿದರು. ಇವರ ಮಾತೃಭಾಷೆ ಹಿಂದಿ ಅದರೂ ಇವರು ಎಲ್ಲಿ ಬಂದು ನೆಲಸುತ್ತಾರೆಯೋ ಆ ಭಾಷೆಯನ್ನೇ ಒಪ್ಪಿಕೊಳ್ಳುತ್ತಾರೆ. 300 ಸಂಸಾರಗಳನ್ನೂ ಒಕ್ಕಲೆಬ್ಬಿಸುವುದಕ್ಕೆ ಒಂದು ಸ್ಟೇ ಆರ್ಡರ್ ಕೊಟ್ಟಿದ್ದರೆ ಅದರಿಂದ ನಾನು ಉಪಕಾರ ಮಾಡಿದ್ದೇನೆಯೇ ವಿನಾ ಅವರಿಗೆ ತೊಂದರೆಯಾಗಿಲ್ಲ. ಅವರು ಎಲ್ಲಿಂದಲೋ ಬಂದಿದ್ದರೂ ಸಹ ನವ್ಮೆಲ್ಲ ಭೂಮಿಯನ್ನು ಉತ್ತು ಬಿತ್ತು ಬೆಳೆಯುತ್ತಿದ್ದಾರೆ. ಅಂಥವರನ್ನು ಭೂಮಿ ಬಿಟ್ಟು ಹೋಗಿ ಎನ್ನುವುದು ಧರ್ಮವಲ್ಲ.

ಈಗ ಸಭೆಯಮುಂದಿರುವ ಮಸೂದೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಜೆ. ವೆಂಕಣ್ಣಪ್ಪ.—ನಾನು ಹೇಳಿದ್ದು ಅರಣ್ಯಖಾತೆಗೆ ಸೇರಿದಂಥ ಭೂಮಿ ಯನ್ನು ಅವರು ಕಾನೂನು ಬಾಹಿರವಾಗಿ ಸಾಗುವಳಿ ಮಾಡಿದ್ದಾರೆಂದು. ಅವರನ್ನು ಬಿಡಿಸಲು ಮಾಡಿದ್ದ ಆರ್ಡರಿಗೆ stay ಕೊಟ್ಟಿದ್ದಾರೆ. ಮಾನ್ಯಮಂತ್ರಿಗಳು ಹೇಳುವ ಪ್ರಕಾರ ಹೋದರೆ ಈ ರಾಜ್ಯದಲ್ಲಿ ಒಂದಗುಲ ಭೂಮಿಯೂ ಉಳಿಯುವುದಿಲ್ಲ. ಮಂತ್ರಿಗಳು ನಾನು ಹೇಳಿದ್ದನ್ನು misquote ಮಾಡಿದರು. ಅಲ್ಲಿ 40ಜನ ಬಂದಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಬಂಜರು ಭೂಮಿಯನ್ನು ಉತ್ತುಕೊಂಡಿದ್ದಾರೆ. ಭೂಮಿ ಇಲ್ಲದೆ ಇದ್ದುದರಿಂದ ಅವರು ಪುಂಡರಾಗಿದ್ದರು. ಭೂಮಿಯಿಲ್ಲ ಗೇಯುತ್ತಿರುವುದರಿಂದ ಅದರ ಪುಂಡತ್ವಹೋಗಿ ಅವರಿಗೆ ಸಾಧುತ್ವ ಬರುತ್ತಿದೆ ಜಮೀನಿಲ್ಲದವರು ಕೆಲಸವಿಲ್ಲದೆ ಪುಂಡನಾಗಿ ಕಳ್ಳತನ ಮುಂತಾದುದನ್ನು ಮಾಡಬೇಕಾಗುತ್ತದೆ. ಅವರಿಗೆ ಜಮೀನು ಕೊಟ್ಟಿದ್ದರಿಂದ ಅವನಲ್ಲಿ ಪುಂಡತ್ವ ಹೋಗಿ ಅವನು ದೇಶಕ್ಕೋಸ್ಕರ ದುಡಿಯುತ್ತಿದ್ದಾನೆ.

Mr. SPEAKER.—The question is:

"That the Mysore Tenancy Laws (Amendment) Bill, 1963, be taken into consideration."

*The motion was adopted.*

Mr. SPEAKER.—The question is:

"That Clauses 2 to 5, both inclusive, stand part of the Bill."

*The motion was adopted.*

Clauses 2 to 5, both inclusive, were added to the Bill.

Mr. SPEAKER.—The question is:

"That Clause 1, the Title and the Preamble stand part of the Bill."

*The motion was adopted.*

Clause 1, the Title and the Preamble were added to the Bill.

*Motion to pass.*

Sri M. V. KRISHNAPPA.—I beg to move:

"That the Mysore Tenancy Laws (Amendment) Bill, 1963, be passed."

Mr. SPEAKER.—The question is:

'That the Mysore Tenancy Laws (Amendment) Bill, 1963, be passed.'

*The motion was adopted.*

---

## MYSORE TENANTS (TEMPORARY PROTECTION FROM EV CTION) BILL, 1963.

*Motion to consider*

Sri M. V. KRISHNAPPA.—Sir, I beg to move:

"That the Mysore Tenants (Temporary Protection from Eviction) Bill, 1963, be taken into consideration."

Mr. SPEAKER.—Motion moved:

"That the Mysore Tenants (Temporary Protection from Eviction) Bill, 1963, be taken into consideration."

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ವಾಮೀ, ಇದು ಕೂಡ ಈ ಹಿಂದೆ ಪಾಸಾದ ಮೈಸೂರು ಟೆನೆನ್ಸಿ (ಅಮೆಂಡ್‌ಮೆಂಟ್) ಬಿಲ್, 1963 ರ ಹಾಗೆ, ಒಂದು ತಿದ್ದುಪಡಿಯ ಮಸೂದೆಯಾಗಿದೆ. ಇದನ್ನೂ ಶ್ರೀಮಾನ್ ಮುಕ್ಕಣ್ಣಪ್ಪನವರೂ ಮತ್ತು ಶ್ರೀಮಾನ್ ಗೋಪಾಲಗೌಡರು ಈಗಾಗಲೇ ಒಪ್ಪಿದಂತೆ ಒಪ್ಪುತ್ತಾರೆಂದು ಭಾವಿಸುತ್ತೇನೆ. 1962 ನೆಯ ಟೆನೆನ್ಸಿ ಆಕ್ಟಿನಂತೆ ರಿಪೀಟು ಮಾಡಬೇಕಾಗಿದೆ, ಅಲ್ಲದೆ ಭೂ ಸುಧಾರಣೆ ಮಸೂದೆ ಜಾರಿಗೆ ಬರುವುದು ತಡವಾಗುತ್ತದೆ. ಆದ ಕಾರಣ ಈ ಶಾಸನ